ಕೋಟಿ ರೂಪಾಯಿಗಳನ್ನು ಮರುಪಾವತಿ ಮಾಡಿದ್ದಾರೆ. ಹೊರ ರಾಜ್ಯದವರೆಂದು ಅವರು ಹೇಳುತ್ತಿದ್ದಾರೆ. ಆದರೆ, ಅವರು ನಮ್ಮ ರಾಜ್ಯದವರೆಂದು ನಾವು ತಿಳಿದುಕೊಂಡಿದ್ದೇವೆ. ಹೊರ ರಾಜ್ಯದವರೆಂದು ಅವರ ಭಾವನೆ ಇರಬಹುದು. ಅವರ ವಿಳಾಸ ತಮಿಳುನಾಡಿನಲ್ಲಿ ಅಥವಾ ಮುಂಬೈನಲ್ಲಿರಬಹುದು ಅಥವಾ ಬೇರೆ ಬೇರೆ ರಾಜ್ಯದಲ್ಲಿರಬಹುದು. ಬೇರೆ ಬೇರೆ ರಾಜ್ಯದವರು ಇಲ್ಲಿಗೆ ಬಂದು ನೆಲೆಸಿ ಆಸ್ತಿ ಮಾಡಿರಬಹುದು. ಅವರು ಆಸ್ತಿಯನ್ನು ಒತ್ತೆ ಇಟ್ಟು ಸಾಲವನ್ನು ಪಡೆದುಕೊಂಡಿದ್ದಾರೆ. ಆದ್ದರಿಂದ, ಇದೇನು ಬೋಗಸ್ ಆಗಿಲ್ಲ. ಬಹುಶ: ಅದು ನಿಮ್ಮ ತಪ್ಪು ಗ್ರಹಿಕೆ ಇರಬಹುದು. ಆದ್ದರಿಂದ, ಇದರ ಬಗ್ಗೆ ಬೇರೆ ರೀತಿ ತಿಳಿದುಕೊಳ್ಳುವ ಅವಶ್ಯಕತೆ ಇಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಉಪಾಧ್ಯಕ್ಷರು : ಈ ಚರ್ಚೆಯನ್ನು ಮುಕ್ತಾಯಗೊಳಿಸಲಾಗಿದೆ.

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಉಪಾಧ್ಯಕ್ಷರೆ, ಅವರು ನಮ್ಮ ರಾಜ್ಯದವರಲ್ಲ. ಇದಕ್ಕೆ ಸಂಬಂಧಪಟ್ಟಂಥ ದಾಖಲೆಗಳನ್ನು ಕೊಡುತ್ತೇನೆ. ಹೊಸೂರಿನಲ್ಲಿರುವ ಅವರಿಗೆ ಬೆಂಗಳೂರಿನಿಂದ ಸಾಲ ಕೊಟ್ಟಿದ್ದಾರೆ. ನನ್ನ ಹತ್ತಿರ ದಾಖಲಾತಿ ಇದೆ.

ಉಪಾಧ್ಯಕ್ಷರು : ಈ ಚರ್ಚೆಯನ್ನು ಮುಕ್ತಾಯಗೊಳಿಸಿದ್ದೇನೆ.

ಶ್ರೀ ಹೆಚ್.ಡಿ.ರೇವಣ್ಣ : 25 ಕೋಟಿ ರೂಪಾಯಿ ಸಾಲ ಕೊಟ್ಟಿರುವಂಥದ್ದನ್ನು ಮಾನ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಮತ್ತೆ ಸದರಿ ಸಾಲವನ್ನು ರೀಕಾಲ್ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಕಳ್ಳತನ ಮಾಡಿರುವುದರಿಂದ ಈಗ ರೀಕಾಲ್ ಮಾಡುತ್ತಿದ್ದೇವೆಂದು ಹೇಳುತ್ತೀರಾ?

ಉಪಾಧ್ಯಕ್ಷರು : ಚರ್ಚೆ ಮುಕ್ತಾಯವಾಗಿದೆ.

ಶ್ರೀ ಹೆಚ್.ಡಿ.ರೇವಣ್ಣ : ದಯಮಾಡಿ ಇದನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕು. ಇಲ್ಲದಿದ್ದರೆ ನಾವು ಸಭಾತ್ಯಾಗ ಮಾಡುತ್ತೇವೆ.

(ಈ ಹಂತದಲ್ಲಿ ಜಾತ್ಯಾತೀತ ಜನತಾದಳದ ಸದಸ್ಯರು ಸಭಾತ್ಯಾಗ ಮಾಡಿದರು)

ಉಪಾಧ್ಯಕ್ಷರು : ದಿನಾಂಕ: 20–7–2009ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಸಂಜೆ 5 ರಿಂದ 6 ಗಂಟೆಯವರೆಗೆ ಶಾಸನ ರಚನಾ ಕಾರ್ಯಕಲಾಪಗಳನ್ನು ನಡೆಸಲಾಗುವುದೆಂದು ತೀರ್ಮಾನಿಸಲಾಗಿದೆ. ಅದರಂತೆ ಈಗ ವಿಧೇಯಕಗಳ ಮಂಡನೆ ಮತ್ತು ಪರ್ಯಾಲೋಚನೆಗಳನ್ನು ತೆಗೆದುಕೊಳ್ಳಲಾಗುವುದು.